ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಯರಗೇರಾ-584 133, ರಾಯಚೂರು, ಕರ್ನಾಟಕ ರಾಜ್ಯ, ಭಾರತ
ಆಡಳಿತ ವಿಭಾಗ E-mail: registrarrur@gmail.com

ಸಂಖ್ಯೆ: ರಾವಿರಾ/ಆಡಳಿತ/ವಿದ್ಯಾವಿಷಯಕ ಸಭೆ/2022-23/690 ದಿನಾಂಕ: 17.08.2022

## ವಿದ್ಯಾವಿಷಯಕ ಪರಿಷತ್ ವಿಶೇಷ ಸಭೆಯ ಸೂಚನಾ ಪತ್ರ

ವಿಷಯ: ದಿನಾಂಕ: 23.08.2022 ರಂದು ಮಂಗಳವಾರ ಬೆಳಿಗ್ಗೆ 11:00 ಗಂಟೆಗೆ ವಿದ್ಯಾವಿಷಯ ಪರಿಷತ್ ಸಭೆಯನ್ನು ಜರುಗಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 17.08.2022

***

ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ವಿದ್ಯಾವಿಷಯಕ ಪರಿಷತ್ ವಿಶೇಷ ಸಭೆಯನ್ನು ಮಂಗಳವಾರ **ದಿನಾಂಕ: 23.08.2022 ರಂದು ಬೆಳಿಗ್ಗೆ 11:00 ಗಂಟೆಗೆ ವಿಶ್ವವಿದ್ಯಾಲಯದ ಆಡಳಿತ ಕಛೇರಿಯಲ್ಲಿ ಆಯೋಜಿಸಲಾಗಿದೆ.** ಕಾರಣ, ತಾವು ಈ ಸಭೆಗೆ ಆಗಮಿಸಬೇಕಾಗಿ ಕೋರಲಾಗಿದೆ.

## ವಿಶೇಷ ಸಭೆಯ ಕಾರ್ಯಸೂಚಿ

1. 2022-23 ಶೈಕ್ಷಣಿಕ ಸಾಲಿಗಾಗಿ ನಡೆದ ಸಂಯೋಜನಾ ಪ್ರಕ್ರಿಯೆಯಲ್ಲಿ ಅಸ್ತಿತ್ವದಲ್ಲಿರುವ 15 ಸಂಯೋಜಿತ ಮಹಾವಿದ್ಯಾಲಯಗಳು ಪ್ರತಿಶತ 30ಕ್ಕಿಂತ ಕಡಿಮೆ ಅಂಕಗಳಿಸಿದ ಕಾರಣ ದಿನಾಂಕ: 22.07.2022ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದ ಪ್ರಕಾರ ಮತ್ತೊಮ್ಮೆ ಸ್ಥಳೀಯ ತನಿಖಾ ಸಮಿತಿಗಳು ಭೌತಿಕ ಮರು ಪರಿಶೀಲನೆ ಮಾಡಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಮುಂದಿನ ಕ್ರಮದ ಬಗ್ಗೆ ಚರ್ಚೆ.
2. ರಾಯಚೂರು ವಿಶ್ವವಿದ್ಯಾಲಯದ ಬೋಧಕ ಹುದ್ದೆಗಳನ್ನು ಭರ್ತಿಮಾಡಿಕೊಳ್ಳುವ ಪರಿನಿಯಮಾವಳಿಗಳ ಕುರಿತು ಚರ್ಚೆ.
3. ಮಾನ್ಯ ಕುಲಪತಿಗಳ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳ ಚರ್ಚೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

(ಪ್ರೊ. ವಿಶ್ವನಾಥ ಎಂ.)
ಕುಲಸಚಿವರು

ಇವರಿಗೆ,
1. ಮಾನ್ಯ ಕುಲಪತಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
2. ರಾಯಚೂರು ವಿಶ್ವವಿದ್ಯಾಲಯದ ಎಲ್ಲಾ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳಿಗೆ.

ಪ್ರತಿಯನ್ನು:
1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560 001.
2. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001.
3. ಕುಲಸಚಿವರು (ಮೌಲ್ಯಮಾಪನ), ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
4. ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
5. ಉಪ ಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
6. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
7. ಕಛೇರಿ ಪ್ರತಿ.

# ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು.

ದಿನಾಂಕ: 23–08–2022 ರಂದು ಮುಂಜಾನೆ 11.00 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು.

## ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:

1) ಪ್ರೊ. ಹರೀಶ ರಾಮಸ್ವಾಮಿ, ಮಾನ್ಯ ಕುಲಪತಿಗಳು – ಅಧ್ಯಕ್ಷರು
2). ಶ್ರೀ ರಾಜ ಶ್ರೀನಿವಾಸ್, – ಸದಸ್ಯರು
3) ಶ್ರೀ ಬಿ.ಎಸ್.ಸುರಗಿಮ್ಮಠ – ಸದಸ್ಯರು
4) ಶ್ರೀ ಮಲ್ಲಿಕಾರ್ಜುನ ಹಳ್ಳೂರ – ಸದಸ್ಯರು
5) ಡಾ. ಶಶಿಕಲಾ ಎನ್.ಓಗಿ – ಸದಸ್ಯರು
6) ಶ್ರೀ ಅಭಿಲಾಶ್ ಐದನಾಳ – ಸದಸ್ಯರು
7) ಶ್ರೀಮತಿ ಲೀನಾ ಹುಳಗೇರಿ, – ಸದಸ್ಯರು
8) ಡಾ. ನೇಹಾ ಸುಖಾನಿ – ಸದಸ್ಯರು
9) ಡಾ. ಶಿವರಾಜ ದೇಶಮುಖ್ – ಸದಸ್ಯರು
10) ಪ್ರೊ. ಯರಿಸ್ವಾಮಿ, ಕುಲಸಚಿವರು (ಮೌಲ್ಯಮಾಪನ) – ಸದಸ್ಯರು
11) ಪ್ರೊ. ಪಾರ್ವತಿ ಸಿ. ಎಸ್. (ಡೀನರು & ಹಣಕಾಸು ಅಧಿಕಾರಿಗಳು)– ಸದಸ್ಯರು
12) ಪ್ರೊ. ಪಿ. ಭಾಸ್ಕರ್, (ಡೀನರು) – ಸದಸ್ಯರು
13) ಪ್ರೊ. ನುಸ್ರತ್ ಫಾತಿಮಾ, (ಡೀನರು) – ಸದಸ್ಯರು
14) ಡಾ. ರಾಘವೇಂದ್ರ ಫತ್ತೇಪೂರು, ನಿರ್ದೇಶಕರು,
ಕಾಲೇಜು ಅಭಿವೃದ್ಧಿ ಮಂಡಳಿ – ಸದಸ್ಯರು
15) ಡಾ: ಜಿ.ಎಸ್. ಬಿರಾದಾರ, ಗ್ರಂಥಪಾಲಕರು – ಸದಸ್ಯರು
16) ಪ್ರೊ. ವಿಶ್ವನಾಥ ಎಂ., ಕುಲಸಚಿವರು – ಸದಸ್ಯ ಕಾರ್ಯದರ್ಶಿಗಳು

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳನ್ನು ಸ್ವಾಗತಿತಿ ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಕಲಂ/ಐಟಂ ನಂ. | ವಿಷಯ | ವಿದ್ಯಾವಿಷಯಕ ಪರಿಷತ್ ನಿರ್ಣಯ |
|---|---|---|
| 1 | 2022–23ರ ಶೈಕ್ಷಣಿಕ ಸಾಲಿಗಾಗಿ ನಡೆದ ಸಂಯೋಜನಾ ಪ್ರಕ್ರಿಯೆಯಲ್ಲಿ ಅಸ್ತಿತ್ವದಲ್ಲಿರುವ 15 ಸಂಯೋಜಿತ ಮಹಾವಿದ್ಯಾಲಯಗಳು ಪ್ರತಿಶತ 30ಕ್ಕಿಂತ ಕಡಿಮೆ ಅಂಕಗಳಿಸಿದ ಕಾರಣ ದಿನಾಂಕ: 22–07–2022ರಂದು ಜರುಗಿದ ವಿದ್ಯಾವಿಷಯಕ ಸಭೆಯ ನಿರ್ಣಯದ ಪ್ರಕಾರ ಮತ್ತೊಮ್ಮೆ ಸ್ಥಳೀಯ ತನಿಖಾ ಸಮಿತಿಗಳು ಭೌತಿಕ ಮತ್ತು ಪರಿಶೀಲನೆ ಮಾಡಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಮುಂದಿನ ಕ್ರಮದ ಬಗ್ಗೆ ಚರ್ಚೆ. | ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರು ಮಂಡನೆ ಮಾಡಿದ 15 ಮಹಾವಿದ್ಯಾಲಯಗಳ ಸ್ಥಳೀಯ ತನಿಖಾ ಸಮಿತಿ ಮರುಪರಿಶೀಲನೆ ವರದಿಯ ಕುರಿತು ವಿಸ್ತ್ರತವಾಗಿ ಚರ್ಚಿಸಿದ ನಂತರ 2022–23ನೇ ಶೈಕ್ಷಣಿಕ ಸಾಲಿಗೆ ಎಲ್ಲಾ 15 ಮಹಾವಿದ್ಯಾಲಯಗಳಿಗೆ ಸಂಯೋಜನೆ ಮುಂದುವರಿಕೆ ಮಾಡಲು ಸರ್ವಾನುಮತದಿಂದ ನಿರ್ಣಯಿಸಲಾಯಿತು. |

| | | |
|---|---|---|
| 2 | ರಾಯಚೂರು ವಿಶ್ವವಿದ್ಯಾಲಯದ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಪರಿನಿಯಮಾವಳಿಗಳ ಕುರಿತ ಚರ್ಚೆ. | ರಾಯಚೂರು ವಿಶ್ವವಿದ್ಯಾಲಯದ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕಾಗಿ ಪರಿನಿಯಮಾವಳಿಗಳನ್ನು ಮಂಡನೆ ಮಾಡಲಾಯಿತು. ಯು.ಜಿ.ಸಿ ನಿಯಮಾವಳಿಗಳು ಹಾಗೂ ಕರ್ನಾಟಕ ಸರ್ಕಾರದ ಮಾರ್ಗದರ್ಶನದಂತೆ ರಚಿಸಲಾದ ಪರಿನಿಯಮಾವಳಿಗಳನ್ನು ಕುರಿತು ವಿವರವಾಗಿ ಚರ್ಚಿಸಿ ಸರ್ವಾನುಮತದಿಂದ ಪರಿನಿಯಮಾವಳಿಗಳನ್ನು ಸಭೆಯಲ್ಲಿ ಅನುಮೋದನೆಯನ್ನು ನೀಡಲಾಯಿತು. |
| 3 | ಮಾನ್ಯ ಕುಲಪತಿಗಳ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳ ಚರ್ಚೆ. | ---- |

23/8/22

**ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿಗಳು**
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

23-8-2022

**ಕುಲಪತಿಗಳು ಮತ್ತು ಅಧ್ಯಕ್ಷರು**
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು